# ಸಿರಿಯ ಸೆರಗು ಸಂಸೆ

ಎತ್ತ ಕಣ್ಣು ಹಾಯಿಸಿದರೂ ಮನ ತಣಿಸುವ ಹರಿದ್ವರ್ಣದ ಟೀ ತೋಟ. ಮಧ್ಯದಲ್ಲೊಂದು ಸುಂದರ ದೇಗುಲ..ಅದರ ಪಕ್ಕದಲ್ಲಿ ತಿಳಿನೀರ ಕೊಳ. ಚಿಕ್ಕಮಗಳೂರು ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರಗಳಾದ ಕಳಸ-ಹೊರನಾಡಿಗೆ ಸಮೀಪದಲ್ಲಿರುವ ಸಂಸೆ ಎಂಬಲ್ಲಿಗೆ ಹೋದರೆ ಈ ಮನಮೋಹಕ ತಾಣವನ್ನು ನೀವು ನೋಡಬಹುದು. ಕಳಸದಿಂದ ಕುದುರೆಮುಖ ರಸ್ತೆಯಲ್ಲಿ 5 ಕಿ.ಮೀ. ಕ್ರಮಿಸಿದರೆ ಸಿಗುತ್ತದೆ ಸಂಸೆ. ರಸ್ತೆಯ ಬದಿಯಲ್ಲೇ ಇರುವ ಟೀ ತೋಟದಲ್ಲಿ ನಿರ್ಮಿಸಲಾಗಿರುವ ಸರ್ವಸಿದ್ಧಿ ಗಣಪತಿಯ ಚಿಕ್ಕ ಗುಡಿ ಈ ಭಾಗಕ್ಕೆ ಬರುವ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ. ಇಲ್ಲಿನ ವಸುಂಧರೆಯ ಸೆರಗಿನಂತಿರುವ ಟೀ ತೋಟದಲ್ಲಿ ಕೆಲಹೊತ್ತು ವಿರಮಿಸಿ ಫೋಟೋ ಕ್ಲಿಕ್ಕಿಸಿಕೊಂಡು, ಕೆಳಗಿರುವ ಟೀ ಶಾಪ್‌ನಲ್ಲಿ ರುಚಿಯಾದ ಟೀಯನ್ನೂ ಸವಿದು ಪ್ರವಾಸದ ನೆನಪನ್ನು ಇನ್ನಷ್ಟು ಹಸಿರಾಗಿಸಿಕೊಳ್ಳಬಹುದು.

**-ಎಚ್.ಎಸ್.ನವೀನಕುಮಾರ್, ಹೊಸದುರ್ಗ**







# ಬಿಸ್ಕತ್ ಗಣಪತಿ

ಉಡುಪಿಯ ಮಣಿಪಾಲ್ ಸ್ಯಾಂಡ್ ಆರ್ಟ್ ತಂಡದ ಮೂವರು ಕಲಾವಿದರು ಸೇರಿಕೊಂಡು, ಬಿಸ್ಕತ್ ಗಣಪತಿಯನ್ನು ಗಣೇಶ ಚತುರ್ಥಿಯ ಸಂದರ್ಭ ರೂಪಿಸಿ ಹಬ್ಬಕ್ಕೊಂದು ವಿಶಿಷ್ಟ ಮೆರಗು ನೀಡಿದ್ದರು.

ಈ ಗಣಪತಿ 9 ಅಡಿ ಎತ್ತರ, 5 ಅಡಿ ಅಗಲವಿದೆ. ಕಾರ್ಡಬೋರ್ಡ್ ಹಾಗೂ 15 ಕೆಜಿ ಉತ್ತಮ ಗುಣಮಟ್ಟದ ಬಿಸ್ಕತ್ ಬಳಸಿಕೊಂಡು ಮೂರು ದಿನಗಳ ಕಾಲ ಕಲಾವಿದರು ಶ್ರಮವಹಿಸಿ ಇದನ್ನು ರಚಿಸಿದ್ದಾರೆ. ಗಣೇಶ ಹಬ್ಬದ ಸಂದರ್ಭ ಈ ಗಣಪತಿಯನ್ನು ಉಡುಪಿಯ ವಿದ್ಯಾಸಮುದ್ರ ಮಾರ್ಗದಲ್ಲಿರುವ ವೀಚಿ ಮೋಟರ್ಸ್ ಶೋರೂಂನಲ್ಲಿ ಪೂಜಿಸಲಾಯಿತು.

**-ತಾರಾನಾಥ್ ಮೇಸ್ತ, ಶಿರೂರು**

# ಜಾಡು ಕಳೆದುಕೊಂಡ ಜಾಡಿ

ಇದೊಂದು ಮಣ್ಣಿನಿಂದ ತಯಾರಾದ ವಿದೇಶೀ ನಿರ್ಮಿತ ಜಾಡಿ. ಇಂತಹ ಜಾಡಿಗಳಲ್ಲಿ ಹಿಂದಿನ ಕಾಲದಲ್ಲಿ ಪೋರ್ಚುಗೀಸ್ ದೇಶದಿಂದ ಮದ್ಯ ಆಮದಾಗುತ್ತಿತ್ತಂತೆ. ಈ ಪುರಾತನ ಜಾಡಿಗಳಲ್ಲಿ ಉಪ್ಪಿನಕಾಯಿ ಮಾಡಲು ಮಾವಿನ ಮಿಡಿಗಳನ್ನು ಚರಟಿಸುವುದು ರೂಢಿ. ಇದರಲ್ಲಿಟ್ಟ ಉಪ್ಪಿನಕಾಯಿ ವರ್ಷಗಟ್ಟಲೆ ಹಾಳಾಗದೇ ಪರಿಮಳ ಕಳೆದುಕೊಳ್ಳದೇ ರುಚಿರುಚಿಯಾಗಿ ಬಹುಕಾಲದವರೆಗೆ ಉಪಯೋಗಕ್ಕೆ ಬರುತ್ತಿತ್ತು.

ಬೆರಳೆಣಿಕೆಯಷ್ಟು ಮನೆಗಳಲ್ಲಿ ಇಂತಹ ಭರಣಿಗಳು ಇದ್ದರೂ ಅವು ಉಪಯೋಗಕ್ಕಿಲ್ಲದೇ ಮೂಲೆಗುಂಪಾಗಿವೆ. ಚಿತ್ರದಲ್ಲಿರುವುದು ಕುಂದಾಪುರದ ಕೋಟೆ ಹನುಮಂತ ದೇವಸ್ಥಾನದ ಬಳಿಯ ನಿವಾಸಿ ರಮಣಿ ಆನಂದ್ರಾಯ ಕಾಮತರ ಮನೆಯಲ್ಲಿರುವ ಶತಮಾನಗಳ ಹಿಂದಿನ ಜಾಡಿ.

**-ಪಿ.ಜಯವಂತ ಪೈ, ಕುಂದಾಪುರ**

